**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>Spl.C. 143/2020</u>**

**<u>P.W.-2</u>**
**<u>C.W.-2</u>**

ಹೆಸರು : ಎನ್ ಶ್ರೀಪತಿ

ತಂದೆಯ ಹೆಸರು : ಲೇಃ ಆರ್ ನರಸಿಂಹಮೂರ್ತಿ

ವಯಸ್ಸು : 59 ವರ್ಷ

ಉದ್ಯೋಗ : ಆಡಳಿತಾಧಿಕಾರಿ , ಭಾರತೀಯ ಜೀವ ವಿಮಾ ನಿಗಮ , ಉಪಗ್ರಹ ಶಾಖೆ , ಮಂಡ್ಯ

ವಾಸಸ್ಥಳ : ಮಂಡ್ಯ

**<u>ದಿನಾಂಕಃ 22.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –</u>**

2017 ರಿಂದ 2021 ರ ವರೆಗೆ ನಾನು ಮೈಸೂರಿನ ವಿಭಾಗೀಯ ಕಛೇರಿ , ಎಲ್ .ಐ .ಸಿ. ಯಲ್ಲಿ ಸಹಾಯಕ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ05.09.2018 ರಂದು, ನಾನು ಕಛೇರಿಯಲ್ಲಿ ಕರ್ತವ್ಯದಲ್ಲಿದ್ದಾಗ ನನ್ನ ಮೇಲಾಧಿಕಾರಿಯವರು ನನ್ನನ್ನು ಕರೆಯಿಸಿ, ಎಸಿಬಿ ಕಛೇರಿಗೆ ಹೋಗಿ ಅಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಿದರು. ಅದರಂತೆ ನಾನು ಮಧ್ಯಾಹ್ನ 12.10 ಕ್ಕೆ ಸದರಿ ಕಛೇರಿಗೆ ಹೋಗಿ ಇನ್ಸ್ ಪೆಕ್ಟರ್ ಶೇಖರ್ ರವರ ಮುಂದೆ ವರದಿ ಮಾಡಿಕೊಂಡಿರುತ್ತೇನೆ. ನಾನು ಅಲ್ಲಿಗೆ ಹೋದಾಗ ಸದರಿ ಕಛೇರಿಯಲ್ಲಿ ಮೈಸೂರಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಿರಿಯ ತರಬೇತಿ ಅಧಿಕಾರಿ ಶ್ರೀ.ನವೀದ್ ಪಾಷ ಎನ್ನುವವರು ಸಹ ಇದ್ದರು. ನಾವಿಬ್ಬರು ಒಟ್ಟಾಗಿ ಇನ್ಸ್

ಪೆಕ್ಟರ್ ರವರ ಮುಂದೆ ಹೋಗಿ ನಮ್ಮ ಪರಿಚಯ ಮಾಡಿಕೊಂಡು , ವರದಿ ಮಾಡಿಕೊಂಡೆವು. ಇನ್ಸ್ ಪೆಕ್ಟರ್ ರವರ ಎದುರಿನಲ್ಲಿ ಶ್ರೀಮತಿ ಶೀಲಾವತಿ ಎನ್ನುವವರು ಕುಳಿತಿದ್ದರು. ಅವರನ್ನು ಇನ್ಸ್ ಪೆಕ್ಟರ್ ರವರು ನಮ್ಮಿಬ್ಬರಿಗೆ ಪರಿಚಯಿಸಿದರು. ಸದರಿ ಶೀಲಾವತಿಯವರು ನೀಡಿದ್ದ ಬೆರಳಚ್ಚು ಮಾಡಿದ್ದ ದೂರನ್ನು ನಮಗೆ ಓದಲು ನೀಡಿದರು. ಅದನ್ನು ನಾವಿಬ್ಬರು ಓದಿಕೊಂಡೆವು.

3. ಸದರಿ ದೂರಿನಲ್ಲಿ, ಆಕೆಯ ಹೆಸರಿನಲ್ಲಿ ಮೈಸೂರು ತಾಲ್ಲೂಕಿನ ಬೆಲವತ್ತ ಗ್ರಾಮದ ಸರ್ವೆ ನಂ. 93/29 ರಲ್ಲಿ 15 X 20 ಅಡಿ ವಿಸ್ತೀಣರ್ದ ನಿವೇಶನ ಇದ್ದು , ಅದರಲ್ಲಿ ಅರ್ಧ ಭಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದು , ಉಳಿದ ಅರ್ಧ ಭಾಗ ಖಾಲಿ ನಿವೇಶನವಿದ್ದು , ಸದರಿ ಬಾಬ್ತು ನಮೂನೆ 11 ಬಿ ಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿದಾಗ ಸಿದ್ದಲಿಂಗಪುರ ಗ್ರಾಮ ಪಂಚಾಯತ್ ಕಛೇರಿಯ ಕಾರ್ಯ ದರ್ಶಿಯಾದ ಮಾರಪ್ಪ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿದ್ದು, ತನಗೆ ಲಂಚದ ಹಣವನ್ನು ಕೊಡಲು ಇಷ್ಟವಿಲ್ಲದ ಕಾರಣ ಆತನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಇತ್ತು. ಅದರಲ್ಲಿ ಸದರಿ ಕಾರ್ಯದರ್ಶಿ ಒಟ್ಟು ರೂ.15,000/- ಲಂಚಕ್ಕಾಗಿ ಬೇಡಿಕೆ ಇಟ್ಟಿದ್ದು , ಅದರಲ್ಲಿ ಕೊನೆಗೆ ರೂ.12,000/- ಗಳನ್ನಾದರು ಕೊಡಬೇಕು ಎಂದು ಬೇಡಿಕೆ ಇಟ್ಟಿದ್ದರು.

4. ನಂತರ ಅಲ್ಲಿ ದೂರುದಾರರಾದ ಶೀಲಾವತಿಯವರು ನಮ್ಮ ಹಾಗೂ ಇನ್ಸ್ ಪೆಕ್ಟರ್ ರವರ ಮುಂದೆ ರೂ.2,000/- ಮುಖ ಬೆಲೆಯ 6 ನೋಟುಗಳನ್ನು ಹಾಜರುಪಡಿಸಿದರು. ಇನ್ಸ್ ಪೆಕ್ಟರ್ ರವರು ಸದರಿ ನೋಟುಗಳನ್ನು ನನಗೆ ಕೊಟ್ಟರು. ನಾನು ಆ ನೋಟುಗಳನ್ನು ಎಣಿಸಿ, ಅವುಗಳ ಮುಖ ಬೆಲೆ ಮತ್ತು ಅವುಗಳ ಮೇಲಿದ್ದ ನಂಬರ್ ಗಳನ್ನು ನಾನು ಓದಿ ಹೇಳಿದಂತೆ ಚಾ.ಸಾ. 3 ನವೀದ್ ಪಾಷ ರವರು ಒಂದು ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡರು.

ಸದರಿ ಹಾಳೆಯನ್ನು ಈಗ ನಾನು ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ಈಗ ನಿಪಿ 21 ಎಂತಲು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 21(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ತನಿಖಾಧಿಕಾರಿಯವರು ನನ್ನನ್ನು ಪಂಚ ಸಾಕ್ಷಿ 1 ಎಂತಲು ನವೀದ್ ಪಾಷ ರವರನ್ನು ಪಂಚ ಸಾಕ್ಷಿ 2 ಎಂತಲು ಹೆಸರಿಸಿದರು. ನಂತರ ಎಸಿಬಿ ಸಿಬ್ಬಂದಿಯವರು ಸದರಿ ನೋಟುಗಳನ್ನು ಒಂದು ಬಿಳಿಯ ಹಾಳೆಯ ಮೇಲೆ ಹರಡಿ, ಆ ನೋಟುಗಳಿಗೆ ಫಿನಾಪ್ತಲೀನ್ ಪೌಡರ್ ನ್ನು ಎರಡೂ ಬದಿಗಳಲ್ಲಿ ಸವರಿಸಿದರು. ನಂತರ ಆ ನೋಟುಗಳನ್ನು ನನಗೆ ನೀಡಿದರು. ನಾನು ಆ ನೋಟುಗಳನ್ನು ಎಣಿಸಿ , ಶೀಲಾವತಿಯವರ ಬಳಿಯಲ್ಲಿ ಇದ್ದಂತಹ ಒಂದು ಸಣ್ಣ ಪರ್ಸ ನಲ್ಲಿ , ಆ ಪರ್ಸನೊಳಗೆ ಬೇರೆ ಯಾವುದೇ ಹಣ ಮತ್ತು ವಸ್ತು ಇರುವುದಿಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡು, ನಂತರ ಅದರೊಳಗೆ ಇಟ್ಟೆನು. ತನಿಖಾಧಿಕಾರಿಯವರು ದೂರುದಾರರಿಗೆ ಈ ಹಣವನ್ನು ಆರೋಪಿ ಕೇಳಿದಾಗ ಮಾತ್ರವೇ ನೀಡಬೇಕು, ಅಲ್ಲಿಯವರೆಗೆ ಸದರಿ ಹಣವನ್ನು ಪರ್ಸ ನಿಂದ ತೆಗೆಯಬಾರದು ಮತ್ತು ಮುಟ್ಟಬಾರದು ಎಂದು ಸೂಚಿಸಿದರು.  ಆರೋಪಿ ಹಣವನ್ನು ಕೇಳಿ ಪಡೆದ ನಂತರ ಫಿರ್ಯಾದುದಾರರು ಕಛೇರಿಯಿಂದ ಹೊರ ಬಂದು ತನ್ನ ಸೀರೆಯ ಸೆರಗಿನಿಂದ ಮುಖ ಒರೆಸಿಕೊಳ್ಳುವ ಮೂಲಕ ಸೂಚನೆಯನ್ನು ನೀಡಬೇಕೆಂದು ಹೇಳಿದರು. ನಂತರ ಅಲ್ಲಿ ಎಸಿಬಿ ಸಿಬ್ಬಂದಿಯವರು ಎರಡು ಗಾಜಿನ ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿಕೊಂಡರು. ನನ್ನ ಎರಡೂ ಕೈನ ಕೈ ಬೆರಳುಗಳನ್ನು ಅದರಲ್ಲಿ ಅದ್ದಿಸಿದರು. ಆಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಗಾಜಿನ ಬಾಟಲಿಗೆ ಹಾಕಿ , ಮುಚ್ಚಳ ಮುಚ್ಚಿ , ಬಟ್ಟೆಯಿಂದ ಕಟ್ಟಿ ಸೀಲು ಮಾಡಿ , ನನ್ನ ಸಹಿ ಇರುವ ಚೀಟಿಯನ್ನು ಅದರ ಮೇಲೆ ಅಂಟಿಸಿದರು.

ಸದರಿ ಬಾಟಲನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಗುಲಾಬಿ ಬಣ್ಣದ ದ್ರಾವಣವಿರುವ ಗಾಜಿನ ಬಾಟಲನ್ನು ಈಗಾಗಲೇ ಎಂ ಒ 1 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಅಲ್ಲಿ ಉಳಿದ ಫಿನಾಪ್ತಲೀನ್ ಪೌಡರ್ ನ್ನು ಒಂದು ಪ್ರತ್ಯೇಕ ಪಾಕೇಟ್ ನಲ್ಲಿ ಹಾಕಿ ಮುಚ್ಚಿ, ಮೊಹರು ಮಾಡಿ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದರು. ಅದನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ಎಂ ಒ 2 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಉಳಿದ ಫಿನಾಪ್ತಲೀನ್ ಪೌಡರ್ ನ ಡಬ್ಬವನ್ನು ಬೀರುವಿನ ಒಳಗೆ ಇಟ್ಟರು. ನಂತರ ಎಲ್ಲರು ಹೋಗಿ ಕೈಗಳನ್ನು ತೊಳೆದುಕೊಂಡೆವು. ಈ ಮೇಲ್ಕಂಡ ಪ್ರಕ್ರಿಯಗಳು ನಡೆಯುತ್ತಿದ್ದ ಕಾಲಕ್ಕೆ ಪೋಟೋಗಳನ್ನು ತೆಗೆಯುತ್ತಿದ್ದರು. ಸದರಿ ಪೋಟೋಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ 3 ರಿಂದ 9 ಎಂದು ಗುರುತುಪಡಿಸಿಕೊಳ್ಳಲಾಗಿದೆ. ದೂರುದಾರರಿಗೆ ಒಂದು ವಾಯ್ಸ ರೆಕಾರ್ಡರ್ ನೀಡಿ , ಅದನ್ನು ಹೇಗೆ ಉಪಯೋಗಿಸುವುದು ಎನ್ನುವುದನ್ನು ತನಿಖಾಧಿಕಾರಿಯವರು ಹೇಳಿಕೊಟ್ಟರು.

5. ನಂತರ ದೂರುದಾರರು ತನ್ನ ಮೊಬೈಲ್ ನಲ್ಲಿದ್ದ ಚಿಪ್ಪನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದರು. ಅದನ್ನು ಒಂದು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ಸಂಭಾಷಣೆಯನ್ನು ನಮ್ಮೆಲ್ಲರಿಗು ಕೇಳಿಸಿದರು ಮತ್ತು ಆ ಸಂಭಾಷಣೆಯನ್ನು ಟೈಪ್ ಮಾಡಿಕೊಂಡರು. ಸದರಿ ಮೆಮೋರಿ ಕಾರ್ಡ ನ್ನು ಅಲ್ಲಿ ಅಮಾನತ್ತು ಪಡಿಸಿಕೊಂಡರು. ಅದನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 3 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಅದರ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.

6. ತನಿಖಾಧಿಕಾರಿಯವರು , ಚಾ,ಸಾ. 3 ರವರಿಗೆ , ದೂರುದಾರರೊಂದಿಗೆ ಇದ್ದು , ಅವರ ಮತ್ತು ಆರೋಪಿಯ ನಡುವೆ ನಡೆಯುವ ಸಂಭಾಷಣೆಯನ್ನು ಕೇಳಿಸಿಕೊಳ್ಳಬೇಕು ಮತ್ತು ಆರೋಪಿ ಹಣವನ್ನು ಪಡೆದು ಎಲ್ಲಿ ಇಟ್ಟುಕೊಳ್ಳುತ್ತಾನೆ ಎನ್ನುವುದನ್ನು ಗಮನಿಸಬೇಕು ಎಂದು ಹೇಳಿದರು.

7. ಆ ಕಛೇರಿಯಲ್ಲಿ ಒಟ್ಟು 3 ಸಿಡಿಗಳನ್ನು ಮಾಡಿದರು.

8. ಮೇಲ್ಕಂಡ ಪ್ರಕ್ರಿಯಗಳ ಬಾಬ್ತು ತನಿಖಾಧಿಕಾರಿಯವರು ಒಂದು ಮಹಜರ್ ಮಾಡಿ ನಮ್ಮ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ 2 ಎಂದು ಗುರುತುಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 2(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

9. ನಂತರ ಮಧ್ಯಾಹ್ನ 02.00 ಗಂಟೆಯ ಸಮಯಕ್ಕೆ ಎರಡು ಇಲಾಖಾ ವಾಹನಗಳಲ್ಲಿ ನಾವೆಲ್ಲರು ಫಿರ್ಯಾದುದಾರರ ಮನೆಯ ಹತ್ತಿರಕ್ಕೆ ಹೋದೆವು. ಆ ಮನೆಯಿಂದ ಸ್ವಲ್ಪ ದೂರದಲ್ಲಿ ವಾಹನಗಳನ್ನು ನಿಲ್ಲಿಸಲಾಗಿತ್ತು. ಅಲ್ಲಿ ಎಲ್ಲರು ಕೆಳಗೆ ಇಳಿದೆವು. ದೂರುದಾರರು ಆರೋಪಿ ಮರಪ್ಪ ರವರಿಗೆ ಫೋನ್ ಮಾಡಿದರು. ಆಗ ಆತ ಈಗ ನಾನು ಹೊರಗೆ ಇದ್ದೇನೆ, ನಾಳೆ ಬೆಳಿಗ್ಗೆ 10.30 ಕ್ಕೆ ಕಛೇರಿಗೆ ಬನ್ನಿ ಎಂದು ತಿಳಿಸಿದರು. ಈ ವಿಷಯವನ್ನು ತನಿಖಾಧಿಕಾರಿಯವರಿಗೆ ದೂರುದಾರರು ತಿಳಿಸಿದರು. ಹೀಗಾಗಿ ಎಲ್ಲರು ಪುನಃ ಎಸಿಬಿ ಕಛೇರಿಗೆ ವಾಪಾಸ್ಸಾದೆವು. ನಂತರ ತನಿಖಾಧಿಕಾರಿಯವರು ಆ ಹಣವನ್ನು ದೂರುದಾರರಿಂದ ಪಡೆದು ಕಛೇರಿಯ ಬೀರುವಿನಲ್ಲಿ ಇಟ್ಟರು.

10. ನಂತರ ದೂರುದಾರರ ಮೊಬೈಲ್ ನಲ್ಲಿ ಇದ್ದಂತಹ ಮೆಮೋರಿ ಕಾರ್ಡನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ಸಂಭಾಷಣೆಯನ್ನು ನಮಗೆಲ್ಲಾ ಕೇಳಿಸಿ 3 ಸಿಡಿಗಳಿಗೆ ವರ್ಗಾಯಿಸಿದರು.

11. ನಂತರ ಮೇಲ್ಕಂಡ ಪ್ರಕ್ರಿಯಗಳ ಬಾಬ್ತು ತನಿಖಾಧಿಕಾರಿಯವರು ಮಹಜರ್ ಮಾಡಿ ನನ್ನ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇದೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ 10 ಎಂದು ಗುರುತುಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 10(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

12. ತನಿಖಾಧಿಕಾರಿಯವರು ನಮಗೆಲ್ಲಾ ಮರು ದಿನ 09.00 ಗಂಟೆಗೆ ಪುನಃ ಎಸಿಬಿ ಕಛೇರಿಗೆ ಬರಬೇಕು ಮತ್ತು ವಿಷಯವನ್ನು ಗೌಪ್ಯವಾಗಿ ಇಡಬೇಕು ಎಂದು ಹೇಳಿ ಕಳುಹಿಸಿಕೊಟ್ಟರು.

13. ಮರು ದಿನ ಅಂದರೆ 6.09.2018 ರಂದು ಬೆಳಿಗ್ಗೆ 09.00 ಗಂಟೆಗೆ ನಾವೆಲ್ಲರೂ ಎಸಿಬಿ ಕಛೇರಿಗೆ ಹೋದೆವು. ಬೆಳಿಗ್ಗೆ 10.00 ಗಂಟೆಗೆ ದೂರುದಾರರು ಆ ಕಛೇರಿಗೆ ಬಂದರು. ನಂತರ ತನಿಖಾಧಿಕಾರಿಯವರು ಬೀರುವಿನಿಂದ ತೆಗೆದುಕೊಟ್ಟ ಕವರ್ ನಲ್ಲಿ ಇದ್ದಂತಹ ಹಣವನ್ನು ನಾನು ಎಣಿಸಿ ನೋಡಿ ಅವುಗಳ ಮೇಲಿದ್ದ ನಂಬರ್ ಗಳು ಈಗಾಗಲೇ ಪ್ರತ್ಯೇಕ ಹಾಳೆಯಲ್ಲಿ ಬರೆದುಕೂಂಡಿದ್ದ ನಂಬರ್ ಗಳೊಂದಿಗೆ ತಾಳೆಯಾಗುತ್ತವೋ ಇಲ್ಲವೋ ಎನ್ನುವುದನ್ನು ದೃಡ ಪಡಿಸಿಕೊಂಡು , ಆ ನಂಬರ್ ಗಳು ತಾಳೆಯಾದ್ದರಿಂದ ಪುನಃ ಆ ನೋಟುಗಳನ್ನು ಕವರ್ ನಲ್ಲಿ ಹಾಕಿ , ದೂರುದಾರರ ಪರ್ಸ ನಲ್ಲಿ ಇಟ್ಟೆ. ಇಡುವ ಮೊದಲು , ಆ ಪರ್ಸ ನಲ್ಲಿ ಬೇರೆ ಯಾವುದೇ

ಹಣ ಮತ್ತು ವಸ್ತುಗಳು ಇರಲಿಲ್ಲ ಎನ್ನುವುದನ್ನು ನೋಡಿ ಖಚಿತ ಪಡಿಸಿಕೊಂಡೆ. ನಂತರ ನಾವೆಲ್ಲರೂ ಕೈಗಳನ್ನು ತೊಳೆದುಕೊಂಡೆವು.

14. ನಂತರ ಎರಡು ಇಲಾಖಾ ವಾಹನಗಳಲ್ಲಿ ನಾವೆಲ್ಲರೂ ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿ ಕಛೇರಿಗೆ ಹೋದೆವು. ವಾಹನವನ್ನು ಆ ಕಛೇರಿಯ ಮುಂದೆ ನಿಲ್ಲಿಸಿದೆವು. ತನಿಖಾಧಿಕಾರಿಯವರು ಮೊದಲು ದೂರುದಾರರು ಮತ್ತು ನವೀದ್ ಪಾಷ ರವರನ್ನು ಕಛೇರಿಯ ಒಳಗಡೆ ಕಳುಹಿಸಿದರು. ಸ್ವಲ್ಪ ಹೊತ್ತಾದ ನಂತರ ದೂರುದಾರರು ಕಛೇರಿಯಿಂದ ಹೊರಗೆ ಬಂದು ತಮ್ಮ ಸೀರೆಯ ಸೆರಗಿನಿಂದ ಮುಖವನ್ನು ಒರೆಸಿಕೂಂಡು ಸೂಚನೆಯನ್ನು ನೀಡಿದರು. ಆಗ ತನಿಖಾಧಿಕಾರಿಯೊಂದಿಗೆ ನಾವೆಲ್ಲರೂ ಆ ಕಛೇರಿಯ ಒಳಗಡೆ ಹೋದೆವು. ಅಲ್ಲಿ ದೂರುದಾರರು ತನಿಖಾಧಿಕಾರಿಯವರಿಗೆ , ಆ ಕಂಪ್ಯೂಟರ್ ಮುಂದೆ ಕೆಲಸ ಮಾಡುತ್ತಿರುವ ವ್ಯಕ್ತಿಯೇ ಮರಪ್ಪ, ಆತ ನನ್ನಿಂದ ಲಂಚದ ಹಣವನ್ನು ಪಡೆದು , ಎರಡೂ ಕೈಗಳಲ್ಲಿ ಎಣಿಸಿ ನಂತರ, ಆ ಹಣವನ್ನು ತನ್ನ ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ತಿಳಿಸಿದರು. ಆಗ ಪಂಚ ಸಾಕ್ಷಿಯೂ ಸಹ, ನಾನು ದೂರದಿಂದಲೇ ನೋಡುತ್ತಿದ್ದೆ , ಆರೋಪಿ ಸನ್ನೆ ಮಾಡಿ ಲಂಚ ಹಣವನ್ನು ಕೇಳಿದರು, ಅದನ್ನು ದೂರುದಾರರು ಕೊಟ್ಟರು , ಆಗ ಆರೋಪಿ ಆ ಹಣವನ್ನು ಎರಡೂ ಕೈಗಳಿಂದ ಎಣಿಸಿ ತನ್ನ ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ತಿಳಿಸಿದರು.

15. ನಂತರ ತನಿಖಾಧಿಕಾರಿಯವರು ತಮ್ಮನ್ನು ಆರೋಪಿಗೆ ಪರಿಚಯಿಸಿಕೊಂಡರು. ಸಿಬ್ಬಂದಿಗಳು ಆರೋಪಿಯ ಎರಡೂ ಕೈಗಳನ್ನು ಹಿಡಿದುಕೊಂಡರು. ಉಳಿದ ಸಿಬ್ಬಂದಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಅಲ್ಲಿಯೇ ತಯಾರಿಸಿಕೊಂಡರು. ಮೊದಲು ಆರೋಪಿಯ ಬಲ ಗೈ ಬೆರಳುಗಳನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ

ತಿರುಗಿತು. ಅದನ್ನು ಒಂದು ಗಾಜಿನ ಬಾಟಲಿಗೆ ಹಾಕಿ ಮುಚ್ಚಳ ಮುಚ್ಚಿ ಬಿಳಿ ಬಟ್ಟೆಯನ್ನು ಕಟ್ಟಿ ಮೊಹರು ಮಾಡಿ , ನನ್ನ ಸಹಿ ಪಡೆದು ಚೀಟಿಯನ್ನು ಅಂಟಿಸಿದರು. ಸದರಿ ಬಾಟಲನ್ನು ಈಗ ನಾನು ನೋಡುತ್ತಿದ್ದೇನೆ. ಅದರ ಮೇಲೆ ಇರುವ ಚೀಟಿಯಲ್ಲಿ ನನ್ನ ಸಹಿ ಇದೆ. ಸದರಿ ಗುಲಾಬಿ ಬಣ್ಣದ ದ್ರಾವಣವಿರುವ ಬಾಟಲಿಯನ್ನು ಈಗಾಗಲೇ ಎಂ ಒ 4 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಆರೋಪಿಯ ಎಡ ಗೈ ಬೆರಳುಗಳನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಗಾಜಿನ ಬಾಟಲಿಗೆ ಹಾಕಿ ಮುಚ್ಚಳ ಮುಚ್ಚಿ ಬಿಳಿ ಬಟ್ಟೆಯನ್ನು ಕಟ್ಟಿ ಮೊಹರು ಮಾಡಿ , ನನ್ನ ಸಹಿ ಪಡೆದು ಚೀಟಿಯನ್ನು ಅಂಟಿಸಿದರು. ಸದರಿ ಬಾಟಲನ್ನು ಈಗ ನಾನು ನೋಡುತ್ತಿದ್ದೇನೆ. ಅದರ ಮೇಲೆ ಇರುವ ಚೀಟಿಯಲ್ಲಿ ನನ್ನ ಸಹಿ ಇದೆ. ಸದರಿ ಗುಲಾಬಿ ಬಣ್ಣದ ದ್ರಾವಣವಿರುವ ಬಾಟಲಿಯನ್ನು ಈಗಾಗಲೇ ಎಂ ಒ 5 ಎಂದು ಗುರುತುಪಡಿಸಿಕೊಳ್ಳಲಾಗಿದೆ.

16. ನಂತರ ತನಿಖಾಧಿಕಾರಿಯವರು ಆರೋಪಿಯನ್ನು ಹಣಕ್ಕಾಗಿ ಕೇಳಿದಾಗ , ಆತ ತನ್ನ ಎಡ ಜೇಬಿನಲ್ಲಿ ಇಟ್ಟುಕೊಂಡಿದ್ದ ಹಣವನ್ನು ಕೈನಿಂದ ತೆಗೆದು ಹಾಜರುಪಡಿಸಿದ. ಅದನ್ನು ತನಿಖಾಧಿಕಾರಿಯವರು ನನಗೆ ನೀಡಿದರು. ನಾನು ಅವುಗಳನ್ನು ಎಣಿಸಿ ಅವುಗಳ ಮೇಲಿದ್ದ ನಂಬರ್ ಗಳನ್ನು ಓದಿ ಹೇಳಿದಾಗ , ಚಾ,ಸಾ. 3 ರವರು ಈಗಾಗಲೇ ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿದ್ದ ನಂಬರ್ ಗಳೊಂದಿಗೆ ಹೋಲಿಸಿ ನೋಡಿದಾಗ ಅವು ತಾಳೆಯಾದವು. ನಂತರ ಆ ಹಣವನ್ನು ಒಂದು ಪ್ಯಾಕೆಟ್ ನಲ್ಲಿ ಹಾಕಿ ಮುಚ್ಚಿ ಮೊಹರು ಮಾಡಿ ಅಮಾನತ್ತು ಪಡಿಸಿಕೊಂಡರು.

17. ನಂತರ ಆರೋಪಿಗೆ ಒಂದು ಪ್ರತ್ಯೇಕ ಪ್ಯಾಂಟ್ ನ ವ್ಯವಸ್ಥೆಯನ್ನು ಮಾಡಿ , ಆತ ಧರಿಸಿದ್ದ ಪ್ಯಾಂಟ್ ನ ಎಡ ಜೇಬಿನ ಒಳ ಭಾಗವನ್ನು ಸೋಡಿಯಂ ಕಾರ್ಬೋನೇಟ್ ನಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಹಾಕಿ , ಮುಚ್ಚಳ ಮುಚ್ಚಿ , ಬಿಳಿಯ ಬಟ್ಟೆಯಿಂದ ಕಟ್ಟಿ , ಮೊಹರು ಮಾಡಿ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಅಮಾನತ್ತು ಪಡಿಸಿಕೊಂಡರು. ಸದರಿ ಬಾಟಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 6 ಎಂದು ಗುರುತುಪಡಿಸಿಕೊಳ್ಳಲಾಗಿದೆ. ನಂತರ ತನಿಖಾಧಿಕಾರಿಯವರು ಆರೋಪಿಯ ಪ್ಯಾಂಟ್ ನ್ನು ಒಂದು ಕವರ್ ನಲ್ಲಿ ಹಾಕಿ ಮುಚ್ಚಿ , ಮೊಹರು ಮಾಡಿ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಅಮಾನುತ್ತ ಪಡಿಸಿಕೊಂಡರು. ಸದರಿ ಪ್ಯಾಂಟ್ ನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 7 ಎಂದು ಗುರುತುಪಡಿಸಿಕೊಳ್ಳಲಾಗಿದೆ.

18. ನಂತರ ದೂರುದಾರರು ತನಗೆ ನೀಡಿದ್ದ ವಾಯ್ಸ್ ರೆಕಾರ್ಡರ್ ನ್ನು ತನಿಖಾಧಿಕಾರಿಯವರಿಗೆ ನೀಡಿದ್ದರು. ಅದನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿದರು ಮತ್ತು ಆ ಸಂಭಾಷಣೆಯನ್ನು ಬೆರಳಚ್ಚು ಮಾಡಿಕೊಂಡರು.

19. ನಂತರ ತನಿಖಾಧಿಕಾರಿಯವರು ಆರೋಪಿ ಮತ್ತು ದೂರುದಾರರನ್ನು ಕೂರಿಸಿಕೊಂಡು ಅವರಿಬ್ಬರ ಮಾದರಿ ಧ್ವನಿಯನ್ನು ಪಡೆದರು.

20. ಫಿರ್ಯಾದುದಾರರ ಕೆಸಲಕ್ಕೆ ಸಂಬಂಧಪಟ್ಟ ದಾಖಾಲತಿಗಳನ್ನು ಕೇಳಿದಾಗ , ಅಲ್ಲಿ ಹಾಜರಿದ್ದ ಪಿಡಿಒ ರವರು ಕಛೇರಿಯ ಬೀರುವಿನಲ್ಲಿದ್ದ ಒಟ್ಟು 12 ದಾಖಲಾತಿಗಳನ್ನು

ಹಾಜರುಪಡಿಸಿದರು. ಸದರಿ ದಾಖಲಾತಿಗಳನ್ನು ಪಿಡಿಒ ರವರು ದೃಡೀಕರಿಸಿ ತನಿಖಾಧಿಕಾರಿಗೆ ನೀಡಿದರು.

21. ಆರೋಪಿ ತನ್ನ ಲಿಖಿತ ಸಮಜಾಯಿಶಿಯನ್ನು ನೀಡಿ ಅದರಲ್ಲಿ, ಫಿರ್ಯಾದುದಾರರು ಆಕೆಯ ಸ್ವತ್ತಿಗೆ ಸಂಬಂಧಪಟ್ಟಂತೆ 1991 ರಿಂದ 1993 ರವರೆಗೆ ಕಂದಾಯವನ್ನು ಕಟ್ಟಿರಲಿಲ್ಲ. ಆ ಕಂದಾಯದ ಬಾಬ್ತು ನಾನು ರೂ.12,000/- ವನ್ನು ಆಕೆಯಿಂದ ಪಡೆದಿರುತ್ತೇನೆ ಎಂದು ಬರೆದು ನೀಡಿದ್ದರು. ದೂರುದಾರರು ಅದನ್ನು ಅಲ್ಲಗಳೆದು, ಆರೋಪಿ ಲಂಚದ ಹಣ ಎಂದು ಸದರಿ ರೂ.12,000/- ಪಡೆದಿರುತ್ತಾನೆ ಎಂದು ತಿಳಿಸಿದರು.

22. ಮೇಲ್ಕಂಡ ಪ್ರಕ್ರಿಯಗಳು ನಡೆಯುತ್ತಿದ್ದ ಕಾಲಕ್ಕೆ ಪೋಟೋಗಳನ್ನು ತೆಗೆಯಲಾಯಿತು. ಸದರಿ ಪೋಟೋಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ 11 ರಿಂದ 19 ಎಂದು ಗುರುತುಪಡಿಸಿಕೊಳ್ಳಲಾಗಿದೆ.

23. ಆ ದಿನ ನೋಡಿದ ಆರೋಪಿ ಇಂದು ನ್ಯಾಯಾಲಯದ ಮುಂದಿದ್ದಾರೆ. ಅವರನ್ನು ನೋಡಿ ಗುರುತಿಸುತ್ತೇನೆ.

24. ಮೇಲ್ಕಂಡ ಪ್ರಕ್ರಿಯಗಳ ಬಾಬ್ತು ತನಿಖಾಧಿಕಾರಿಯವರು ಮಹಜರ್ ಮಾಡಿ ನನ್ನ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 20 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 20(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಈ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**Spl.C.No.143/20**
**P.W.-2**
**C.W.-2**

**ಪಾಟೀಸವಾಲುಃ ಇಂದು ವಕೀಲರು ಎಲ್ಲಾ ನ್ಯಾಯಾಲಯಗಳ ಕಲಾಪಗಳನ್ನು ಬಹಿಷ್ಕರಿಸಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.